## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1004 |
| 2 | ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 12-03-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಓಕಳಿಪುರಂ ನಿಂದ ರೈಲ್ವೆ ನಿಲ್ದಾಣದವರೆಗೂ ನಿರ್ಮಾಣ ಮಾಡಲಾಗಿರುವ ರಾಜೀವ್‌ಗಾಂಧಿ ಸಿಗ್ನಲ್ ಮುಕ್ತ ಅಷ್ಟಪಥ ರಸ್ತೆಯ ಕಾಮಗಾರಿಯು ಪ್ರಾರಂಭವಾಗಿದ್ದು ಯಾವಾಗ ಹಾಗೂ ಪ್ರಸ್ತುತ ಯಾವ ಹಂತದಲ್ಲಿದೆ; | ಬೆಂಗಳೂರು ನಗರದ ಓಕಳೀಪುರಂನಿಂದ ಫೌಂಟೇನ್ ವೃತ್ತದವರೆಗೆ ಲೂಪ್‌ಗಳೊಂದಿಗೆ ಅಷ್ಟಪಥ ಕಾರಿಡಾರ್ ನಿರ್ಮಾಣ ಕಾಮಗಾರಿಗೆ ದಿನಾಂಕ:10.12.2012 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ದಿನಾಂಕ: 01.07.2015 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿ ಬಹುತೇಕ ಪೂರ್ಣಗೊಂಡಿರುತ್ತದೆ. ಪ್ರಸ್ತುತ ರೈಲ್ವೇ ಇಲಾಖೆಯ ವತಿಯಿಂದ ಬೆಂಗಳೂರು-ಚೆನ್ನೈ ರೈಲ್ವೇ ಹಳಿಗಳ ಕೆಳಭಾಗದಲ್ಲಿ ಬಾಕಿ ಇದ್ದ ಎರಡು ಕೆಳ ಸೇತುವೆಗಳ ನಿರ್ಮಾಣ ಕಾಮಗಾರಿಯ ಪೂರ್ಣಗೊಂಡಿದ್ದು, ಕೆಳ ಸೇತುವೆಗಳ ಮಧ್ಯ ಭಾಗದಲ್ಲಿ ತಡೆಗೋಡೆಗಳನ್ನು ನಿರ್ಮಿಸುವ ಕಾಮಗಾರಿಗಳು ರೈಲ್ವೇ ಇಲಾಖೆಯ ವತಿಯಿಂದ ಪ್ರಗತಿಯಲ್ಲಿರುವುದರಿಂದ ಪಾಲಿಕೆಯ ವತಿಯಿಂದ ಕೈಗೆತ್ತಿಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುವುದಿಲ್ಲ. ರೈಲ್ವೇ ಇಲಾಖೆರವರು ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| ಆ) | ಕಾಮಗಾರಿಯನ್ನು ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿತ್ತು; ಕಾಮಗಾರಿ ಪೂರ್ಣಗೊಳಿಸಲು ನೀಡಲಾದ ಕಾಲಾವಧಿ ಎಷ್ಟು; ನೀಡಲಾಗಿರುವ ಕಾಲವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಾರೆಯೇ; | ಈ ಕಾಮಗಾರಿಯನ್ನು ಗುತ್ತಿಗೆದಾರರಾದ ಮೆ॥ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ ರವರಿಗೆ ನೀಡಲಾಗಿರುತ್ತದೆ. ಕಾಮಗಾರಿ ಪೂರ್ಣಗೊಳಿಸಲು 18 ತಿಂಗಳು ಕಾಲಾವಧಿಯನ್ನು ನೀಡಲಾಗಿತ್ತು. ಗುತ್ತಿಗೆದಾರರು ನಿರ್ವಹಿಸಬೇಕಾಗಿರುವ ಕೆಲವು ಕಾಮಗಾರಿಗಳನ್ನು ವಿಳಂಬವಾಗಿ ಪೂರ್ಣಗೊಳಿಸದಿರುವುದಕ್ಕೆ ರೂ.56,63,972/-ಗಳ ದಂಡವನ್ನು ವಿಧಿಸಲಾಗಿದೆ. |
| ಇ) | ಸರ್ಕಾರ ನೀಡಿರುವ ಸಮಯಕ್ಕೆ ಸರಿಯಾಗಿ ಕಾಮಗಾರಿ ಪೂರ್ಣೈಸದಿದ್ದರೆ, ಸರ್ಕಾರದ ನಿಯಮದಡಿ ಗುತ್ತಿಗೆದಾರರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ; | |
| ಈ) | ಈ ಯೋಜನೆಗೆ ಪ್ರಾರಂಭದಲ್ಲಿ ಎಷ್ಟು ಕೋಟಿ ರೂಪಾಯಿ ಟೆಂಡರ್‌ಗೆ ಅನುಮತಿ ನೀಡಲಾಗಿದೆ, ತದನಂತರ ಹೆಚ್ಚುವರಿಯಗಿ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು; (ಕಾರಣಗಳೊಂದಿಗೆ ಪೂರ್ಣ ವಿವರ ಒದಗಿಸುವುದು) | ಈ ಯೋಜನೆಗೆ ರೂ.102.83 ಕೋಟಿಗಳ ಗುತ್ತಿಗೆಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿಯು Lump sum Turnkey Contract ಆಗಿರುವುದರಿಂದ ಈ ಮೊತ್ತದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ ಹಾಗೂ ಹೆಚ್ಚುವರಿಯಾಗಿ ರೂ.10.00 ಕೋಟಿಗಳ ಅನುದಾನವನ್ನು "ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಯ ಅಡಿಯಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಈ ಅನುದಾನವನ್ನು ಉಪಯುಕ್ತತೆಗಳ ಸ್ಥಳಾಂತರಿಸುವಿಕೆ ಮತ್ತು ರೈಲ್ವೇ ಮಾರ್ಗದ ಕೆಳಭಾಗದಲ್ಲಿ ರೈಲ್ವೇ ಇಲಾಖೆಯ ವತಿಯಿಂದ ನಿರ್ಮಿಸಲಾಗುತ್ತಿರುವ ಕೆಳಸೇತುವೆಗಳ ನಿರ್ಮಾಣ ಸಂದರ್ಭದಲ್ಲಿ ಉಂಟಾದ ಹೆಚ್ಚುವರಿ ಪರಿಮಾಣಗಳಿಗೆ ಉಪಯೋಗಿಸಿಕೊಳ್ಳಲು ಯೋಜಿಸಲಾಗಿದ್ದು, ಈವರೆಗೂ ಸದರಿ ಹೆಚ್ಚುವರಿ ಅನುದಾನವನ್ನು ಬಳಸಿಕೊಂಡಿರುವುದಿಲ್ಲ. |

ನಅಇ 210 ಎಂಎನ್‌ವೈ 2026 (ಇ)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ